# ಬಾಯಾರಿದೆ ಕೊಪ್ಪಳ ಎಲ್ಲಿದೆ ಜೀವಜಲ?

■ ಚಿತ್ರಗಳು: ಪ್ರಕಾಶ ಕಂದಕೂರ
■ ಆನಂದತೀರ್ಥ ಪ್ಯಾಟಿ



**ನೀರಿಗಾಗಿ ನಡಿಗೆ:** ಹೇಗೋ ತುಂಬಿಸಿಕೊಂಡ ಕೊಡಗಳನ್ನು ಕತ್ತೆಯ ಮೇಲೇರಿ, ತಾನೂ ಒಂದು ಕೊಡ ಹೊತ್ತು ಊರಿನತ್ತ ಸಾಗುತ್ತಿರುವ ಕವಲೂರು ಗ್ರಾಮಸ್ಥ

## ನೀರು ಕಣ್ಣೀರು

ಕಣ್ಣಿಗೆ ರಾಚುವ ಬಿಸಿಲು. ಅಸಹನೀಯ ಧಗೆ. ಕೆಂಡದಂತೆ ಸುಡುತ್ತಿದ್ದ ನೆಲದ ಮೇಲೆ ಬರಿಗಾಲಿನಲ್ಲಿ ನಡೆಯುತ್ತಿದ್ದ ಗಂಗವ್ವಗೆ ಮಾತಾಡಲು ಪುರುಸೊತ್ತಿಲ್ಲ. ಹೆಸರು ಗಂಗವ್ವ, ಬದುಕಿನಲ್ಲಿ ನೋಡಿದರೆ ಗಂಗೆಗೆ ತತ್ವಾರ. ಕೆರೆಯ ಒಂದು ಕಡೆ ತಗ್ಗಿನಲ್ಲಿ ನಿಂತಿರುವ ನೀರು ತರಲು ತಲೆಯ ಮೇಲೊಂದು, ಬಗಲಲ್ಲಿ ಮತ್ತೊಂದು ಕೊಡ ಹೊತ್ತು ನಡೆಯುತ್ತಿದ್ದ ಆಕೆಗೆ ‘ನೀರು ಸಿಗದಿದ್ದರೆ ಹೇಗೆ’ ಎಂಬ ಆತಂಕ.

ಆಕೆ ತೋರಿಸಿದ ದಾರಿಯತ್ತ ನಡೆದರೆ ಅಲ್ಲಾಗಲೇ ಮೂರ್ನಾಲ್ಕು ಜನರು ಕೊಡ ಇಟ್ಟುಕೊಂಡು ಕಾಯುತ್ತಿದ್ದರು. ಒಬ್ಬ ತಾಯಿ ಮೊಳಕಾಲಿನವರೆಗೆ ಕೆಸರಿನಲ್ಲಿದ್ದುಕೊಂಡೇ ತಂಬಿಗೆಯಿಂದ ಕೊಡಕ್ಕೆ ನೀರು ತುಂಬುತ್ತಿದ್ದಳು. ಅದಕ್ಕೂ ಮೊದಲು ಆ ತಂಬಿಗೆಯಿಂದಲೇ ಹೊಟ್ಟೆ ತುಂಬ ನೀರು ಕುಡಿದಳು. ಆ ನೀರಿನ ಬಣ್ಣ ಹೇಗಿತ್ತು ಗೊತ್ತೇ?

ಇನ್ನೊಂದು ಕಡೆ ಕೆರೆಯಲ್ಲಿ ನಿಂತ ನೀರನ್ನು ಕೊಡದಲ್ಲಿ ತುಂಬಲು ಮಕ್ಕಳು ಸಾಹಸ ಮಾಡುತ್ತಿದ್ದರು. ಸ್ಟೀಲ್ ತಂಬಿಗೆ ಕೂಡ ಮುಳುಗದಷ್ಟು ನೀರು ಅಲ್ಲಿತ್ತು. ಅದನ್ನೇ ಸ್ವಲ್ಪ ಸ್ವಲ್ಪವೇ ತುಂಬಿಕೊಂಡು, ಕೊಡಕ್ಕೆ ಹಾಕುತ್ತಿದ್ದರು.

ಕಳೆದ ಒಂದೆರಡು ದಶಕಗಳಲ್ಲಿ ಪದೇ ಪದೇ ಬರಗಾಲಕ್ಕೆ ಸಿಲುಕುತ್ತಿರುವ ಕೊಪ್ಪಳ ಜಿಲ್ಲೆಯಲ್ಲಿ ಈ ತೆರನಾದ ಚಿತ್ರಣ ಬೇಸಿಗೆ ಸಮಯದಲ್ಲಿ ಸಾಮಾನ್ಯವಾಗುತ್ತಿದೆ. ಫೆಬ್ರುವರಿ ತಿಂಗಳ ಹೊತ್ತಿಗಾಗಲೇ ನೀರಿನ ಕೊರತೆ ಶುರುವಾಗಿ, ಅದು ಮೇ–ಜೂನ್ ಸಮಯಕ್ಕೆ ತಾರಕಕ್ಕೆ ಏರುತ್ತದೆ. ‘ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ’ ಎಂಬ ಸುದ್ದಿಗಳು ಹೀಗೆ ಪ್ರಕಟವಾಗಿ ಹಾಗೆ ಮರೆಯಾಗಿಬಿಡುತ್ತವೆ. ಕುಡಿಯಲು ಸಮರ್ಪಕ



**ಬರಿಗೊಡಗಳಿಗೆ ಸಮಾಧಾನ:** ಕೊಪ್ಪಳ ಜಿಲ್ಲೆಯ ಕವಲೂರಿನಲ್ಲಿ ಊರನ್ನು ಅಳೆಯುವಂತೆ ಸಾಲುಗಟ್ಟಿರುವ ಕೊಡಗಳು